ಕೃಷ್ಣಾ ಬಲದಂಡೆ ನಾಲೆಗೆ ಉಪಯೋಗಿಸುವ ನೀರಿನ ಪ್ರಮಾಣ

3083(3081); ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)

ಅ) ರಾಯಚೂರು ಜಿಲ್ಲೆಯ ಲಿಂಗಸುಗೂರು ಮತ್ತು ದೇವದುರ್ಗ ತಾಲ್ಲೂಕಿನ ಕೃಷ್ಣ ಬಲದಂಡೆ ಕಾಲುವೆ ವ್ಯಾಪ್ತಿಯಲ್ಲಿ ಎಷ್ಟು ಸಾವಿರ ಹೆಕ್ಟೇರ್ ಭೂಮಿ ನೀರಾವರಿಗೆ ಒಳಪಟ್ಟಿದೆ; ಎಷ್ಟು ಟಿ.ಎಂ.ಸಿ. ನೀರು ಬಲದಂಡೆ ಕಾಲುವೆಗೆ ನಿಗದಿಪಡಿಸಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು);

ಆ) ಈಗ ಬಲದಂಡೆ ನಾಲೆಗೆ ಉಪಯೋಗಿಸುವ ನೀರಿನ ಪ್ರಮಾಣವೆಷ್ಟು?

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲ ಸಂಪನ್ಮೂಲ ಸಚಿವರು)

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಬಲದಂಡೆ ಕಾಲುವೆ ವ್ಯಾಪ್ತಿಯಲ್ಲಿ ರಾಯಚೂರು ಜಿಲ್ಲೆಯ ಲಿಂಗಸಗೂರು ಮತ್ತು ದೇವದುರ್ಗ ತಾಲ್ಲೂಕಿನಡಿ ನೀರಾವರಿಗೆ ಒಳಪಡುವ ಕ್ಷೇತ್ರ ಹಾಗೂ ನಿಗದಿಪಡಿಸಿದ ನೀರಿನ ಬಳಕೆ ವಿವರಗಳು ಈ ಕೆಳಗಿನಂತಿವೆ :

ಕ್ರ ಸಂ	ಕಾಲುವೆ ಕಾಮಗಾರಿ ವಿವರ	ತಾಲ್ಲೂಕಿನ ಹೆಸರು	ನೀರಾವರಿಗೆ ಒಳಪಡುವ ಕ್ಷೇತ್ರ	ನಿಗಧಿಪಡಿಸಿದ ನೀರಿನ ಬಳಕೆ
1	ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ. 0.00 ರಿಂದ 95.00 (ಎನ್ಆರ್‌ಬಿಸಿ ವಿತರಣಾ ಕಾಲುವೆ ಸಂ.9(ಎ) ಒಳಗೊಂಡು)	ಲಿಂಗಸಗೂರು ದೇವದುರ್ಗ	12,000 ಹೆಕ್ಟೇರ್ 80,550 ಹೆಕ್ಟೇರ್	41.35 ಟಿಎಂಸಿ (ಕೃ.ಮೇ.ಯೋ. ಹಂತ-2 ಮತ್ತು 3 ರಡಿ ಒಟ್ಟಾರೆ ನೀರಿನ ಹಂಚಿಕೆ)
2	ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಕಿ.ಮೀ. 95.00 ರಿಂದ 167.40.	ದೇವದುರ್ಗ	ಸುಮಾರು 23,450 ಹೆಕ್ಟೇರ್	

ಪ್ರಸ್ತುತ ನಾರಾಯಣಪುರ ಬಲದಂಡೆ ಕಾಲುವೆ ವ್ಯಾಪ್ತಿಯಡಿ ಲಿಂಗಸಗೂರು ಹಾಗೂ ದೇವದುರ್ಗ ತಾಲ್ಲೂಕಿನಡಿಯ ಒಟ್ಟು 96,546 ಹೆ. ಕ್ಷೇತ್ರವು ಅಧಿಸೂಚನೆಗೊಂಡಿದ್ದು, ನೀರಾವರಿಗೆ ಒಳಪಟ್ಟಿರುತ್ತದೆ.

ಆ) 2014–15ನೇ ಸಾಲಿನಲ್ಲಿ ನಾರಾಯಣಪುರ ಬಲದಂಡೆ ಕಾಲುವೆಯಡಿ ದಿನಾಂಕ 30.07.2014ರಿಂದ ದಿನಾಂಕ 20.03.2015ರವರೆಗೆ ಒಟ್ಟು 26.00 ಟಿಎಂಸಿ ನೀರನ್ನು ನೀರಾವರಿಗೆ ಹರಿಬಿಡಲಾಗಿರುತ್ತದೆ.

ಪೋಡಿ ಮುಕ್ತ ಗ್ರಾಮಗಳು

3086(3051); ಶ್ರೀ ಬಾಲಕೃಷ್ಣ ಹೆಚ್.ಸಿ (ಮಾಗಡಿ)

ಅ) ಪೋಡಿ ಮುಕ್ತ ಗ್ರಾಮಗಳನ್ನು ಮಾಡುವ ಪ್ರಸ್ತಾಪನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಮಾಗಡಿ ತಾಲ್ಲೂಕಿನಲ್ಲಿ ಪೋಡಿ ಮುಕ್ತ ಗ್ರಾಮಗಳನ್ನಾಗಿ ಮಾಡಲು ಎಷ್ಟು ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ;

ಇ) ಯಾವ ಕಾಲಮಿತಿಯಲ್ಲಿ ಗ್ರಾಮಗಳನ್ನು ಪೋಡಿ ಮುಕ್ತಗೊಳಿಸಲಾಗುವುದು?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಹೌದು

ಆ) ಪ್ರಸ್ತುತ ಪ್ರತಿ ತಾಲ್ಲೂಕಿನಲ್ಲಿ ಪ್ರತಿ ತಿಂಗಳಿಗೆ ಒಂದೊಂದು ಗ್ರಾಮವನ್ನು ಪೋಡಿ ಮುಕ್ತ ಗ್ರಾಮಗಳನ್ನಾಗಿಸಲು ಪ್ರಸ್ತಾವನೆಯಿದ್ದು, ಅದರಂತೆ ಮಾಗಡಿ ತಾಲ್ಲೂಕಿನಲ್ಲಿಯೂ ಕ್ರಮಕೈಗೊಳ್ಳಲಾಗುವುದು.

ಇ) ಪ್ರತಿ ತಿಂಗಳಿಗೆ ಒಂದು ತಾಲ್ಲೂಕಿನಲ್ಲಿ ಒಂದು ಗ್ರಾಮವನ್ನು ಪೋಡಿ ಕಡತ ಮುಕ್ತಗೊಳಿಸಲು ಯೋಜನೆ ಕೈಗೊಳ್ಳಲಾಗುವುದು.